C.C. No.225/22 P.W. 1 Dated :08-05-2024.

ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು: ಶ್ರೀ.ಎಂ.ಎಸ್.ಎಲ್.ವಕೀಲರಿಂದಃ

ನಾನು ವ್ಯವಸಾಯ ಮಾಡುತ್ತೇನೆ. ವ್ಯವಸಾಯವನ್ನು ಹೊರತುಪಡಿಸಿ ನಾನು ಬೇರೆ ವ್ಯವಹಾರ ಮಾಡುವುದಿಲ್ಲ. ವ್ಯವಸಾಯದಿಂದ ನನಗೆ ವಾರ್ಷಿಕವಾಗಿ ಸುಮಾರು 6 ರಿಂದ 7 ಲಕ್ಷ ಆದಾಯವಿರುತ್ತದೆ. ಮಂಜುನಾಥ ಎಂಬುವವರು ಬ್ಯಾಂಕ್ ಉದ್ಯೋಗಿಯಾಗಿದ್ದು, ಅವರ ಮುಖಾಂತರ ನನಗೆ ಆರೋಪಿ ಪರಿಚಯವಾಗಿದ್ದರು. ಬಾಳ್ಳುಪೇಟೆಯಲ್ಲಿ ನನಗೆ ಸೇರಿದ ವಾಹನದ ಸರ್ವೀಸ್ ಸ್ಟೇಷನ್ ಇತ್ತು, ಅಲ್ಲಿಗೆ ಆಗಾಗ ಭೇಟಿ ನೀಡುತ್ತಿದ್ದೆನು. ಬಾಳ್ಳುಪೇಟೆಯಲ್ಲಿ ನಾನು ಹಣಕಾಸಿನ ವ್ಯವಹಾರ ಮಾಡುತ್ತಿದ್ದೆನು ಎಂದರೆ ಸರಿಯಲ್ಲ. ಆರೋಪಿ ನನ್ನ ಬಳಿ 8 ಲಕ್ಷ ರೂ.ಗಳನ್ನು ಸಾಲವಾಗಿ ಕೇಳಿದರು. ದಿಃ22-02-2021 ರಂದು ನಾನು ಆರೋಪಿಗೆ ಹಣ ನೀಡಿದೆನು. ನನ್ನ ಬಳಿ 7 ಲಕ್ಷದ 85 ಸಾವಿರ ರೂ.ಗಳನ್ನು ಇಟ್ಟುಕೊಂಡಿದ್ದೆನು, ಅದನ್ನು ಆರೋಪಿಗೆ ನೀಡಿದೆನು. ಆರೋಪಿಗೆ ಹಣವನ್ನು ನಗದಾಗಿ ನೀಡಿದೆನು. 2 ಲಕ್ಷಕ್ಕೂ ಮೇಲ್ಪಟ್ಟ ಹಣದ ವ್ಯವಹಾರವನ್ನು ಬ್ಯಾಂಕ್ ಮುಖಾಂತರ ವ್ಯವಹರಿಸಬೇಕು ಎಂದರೆ ನನಗೆ ತಿಳಿದಿರುವುದಿಲ್ಲ. 500-00 ರೂ, 200-00 ಹಾಗೂ 100-00 ರೂ.ಗಳ ಮುಖಬೆಲೆಯ ನೋಟುಗಳನ್ನು ಆರೋಪಿಗೆ ನೀಡಿದೆನು , ಅದರಲ್ಲಿ ಎಷ್ಟು ಕಟ್ಟುಗಳ ಹಣವನ್ನು ಆರೋಪಿಗೆ ನೀಡಿದೆನು ಎಂದು ನನಗೆ ಈಗ ನೆನಪಿರುವುದಿಲ್ಲ.

ಮುಂದುವರಿದ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು , ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ .

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಆಲೂರು.